ದಿನಾಂಕ 12-10-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ. ಎಸ್.ಹೆಚ್.ಎಸ್ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಹೆಸರನ್ನು ಬರೆಯುವುದನ್ನು ಹೊರತುಪಡಿಸಿ ಓದಲು ಮತ್ತು ಬರೆಯಲು ಬರುವುದಿಲ್ಲ. ಈ ದಾವೆಯನ್ನು ಸಲ್ಲಿಸಲು ಅಗತ್ಯ ಇದ್ದ ದಾಖಲೆಗಳನ್ನು ನಾನೇ ತೆಗೆಸಿ ನೀಡಿರುತ್ತೇನೆ. ವಕೀಲರನ್ನು ಭೇಟಿ ಮಾಡಿ ಯಾವ ರೀತಿಯ ದಾಖಲೆಗಳು ಬೇಕು ಎಂದು ವಿವರ ಪಡೆದ ನಂತರ ದಾಖಲೆಗಳನ್ನು ತೆಗೆಸಿ ಕೊಟ್ಟಿರುತ್ತೇನೆ. 2 ನೇ ವಾದಿ ನನ್ನ ತಂಗಿ. ಆಕೆಯು ಯಾವುದೇ ಆಸ್ತಿಗಳನ್ನು ಖರೀದಿ ಮಾಡಿರುವುದಿಲ್ಲ. 2 ನೇ ವಾದಿಯು ಅಜ್ಜ ಮತ್ತು ಅಜ್ಜಿಯ ಆಸ್ತಿಯನ್ನು ವಹಿವಾಟು ಮಾಡುತ್ತಿದ್ದಾರೆ. ಸಾಕ್ಷಿಗೆ ಸಾವೀಕೆರೆ ಗ್ರಾಮದ ಆಸ್ತಿ ಸಂಃ 178 ಮತ್ತು 178/ಎ ರ ಕರ ನಿರ್ಧರಣಾ ಪಟ್ಟಿಯ ದೃಢೀಕೃತ ನಕಲುಗಳನ್ನು ತೋರಿಸಿ ಸದರಿ ಆಸ್ತಿಗಳು ಮಂಜವ್ವ ರವರು ವಹಿವಾಟು ಮಾಡುತ್ತಿದ್ದಾರೆ ಎಂಬ ಸೂಚನೆಗೆ ಸಾಕ್ಷಿಯು ನನಗೆ ಆಕೆಯು ವಹಿವಾಟು ಮಾಡುತ್ತಿರುವ ಆಸ್ತಿಯ ಸಂಖ್ಯೆಗಳು ಗೊತ್ತಿಲ್ಲ ಆದರೆ ಒಂದು ಮನೆಯಲ್ಲಿ ಮಾತ್ರ ವಹಿವಾಟು ಮಾಡುತ್ತಿದ್ದಾಳೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ ಸಂಃ 178 ಮತ್ತು 178/ಎ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿ ಹಿಸ್ಸೇ ಕೇಳಿರುವುದಿಲ್ಲ ಎಂದರೆ ಗೊತ್ತಿಲ್ಲ. ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸದೇ ಇರುವುದರಿಂದ ದಾವೆಯು ಊರ್ಜಿತವಲ್ಲ ಎಂದರೆ ಸಾಕ್ಷಿಯು ಕೇವಲ ನನ್ನ ತಂದೆ ತಾಯಿಯ ಪಿತ್ರಾರ್ಜಿತ ಆಸ್ತಿಗಳಲ್ಲಿ ಹಕ್ಕನ್ನು ಮಾತ್ರ ಕೇಳಿರುತ್ತೇವೆ ಎಂದು ನುಡಿಯುತ್ತಾರೆ. ಆಸ್ತಿ ಸಂಃ 178 ಮತ್ತು 178/ಎ ನನ್ನ ಅಜ್ಜ ಮತ್ತು ಅಜ್ಜಿ ರವರಿಂದ ಬಂದಂತಹ ಆಸ್ತಿಗಳು ಎಂದರೆ ಸರಿ.

2. ದಾವಾ ಶೆಡ್ಯೂಲ್ ಎ(3)ರ ಸ್ವತ್ತು 4 ನೇ ಪ್ರತಿವಾದಿಯ ಹಿಸ್ಸೇಯ ಜಮೀನಾಗಿದ್ದು ಅದನ್ನು ಆತನು ನಾರಾಯಣ ಮಲಗುಂದ ಎಂಬುವವರಿಗೆ ಮಾರಾಟ



ಮಾಡಿದ್ದನು ಎಂದರೆ ಸರಿ. ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿಯೇ ಸದರಿ ಜಮೀನನ್ನು 4 ನೇ ಪ್ರತಿವಾದಿ ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ದಾವಾ ಶೆಡ್ಯೂಲ್ ಎ(3)ರ

ಸ್ವತ್ತನ್ನು ನಾರಾಯಣ ಮಲಗುಂದ ರವರು ಖರೀದಿ ಮಾಡಿದ ನಂತರ ಪ್ರಸ್ತುತ ಅದರ ಸ ನಂಃ 32/3 ಎಂದು ಬದಲಾವಣೆ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಬದಲಾವಣೆಯು ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿಯೇ ಆಗಿತ್ತು ಎಂದರೆ ಗೊತ್ತಿಲ್ಲ.

3. ಕ್ಯಾತಪ್ಪ ಅರಳೇಶ್ವರ ರವರು ನನ್ನ ಅಜ್ಜ. ಸದರಿ ಅಜ್ಜನನ್ನು ನಾನು ನೋಡಿರುವುದಿಲ್ಲ. ನನ್ನ ತಂದೆ ಯಲ್ಲಪ್ಪ ರವರು ಮರಣ ಹೊಂದುವ ಕಾಲಕ್ಕೆ ಸುಮಾರು 80-85 ವರ್ಷ ಆಗಿತ್ತು ಎಂದರೆ ಇರಬಹುದು. ಅವರು ಸಾಯುವಾಗ ಆರೋಗ್ಯವಂತರು ಇದ್ದರು ಎಂದರೆ ಸಾಕ್ಷಿಯು ಅವರ ಹೊಟ್ಟೆಯಲ್ಲಿ ಗಡ್ಡೆ ಬಂದು ಸಮಸ್ಯೆ ಆಗಿತ್ತು ಎಂದು ನುಡಿಯುತ್ತಾರೆ. ಅವರು ಮರಣ ಹೊಂದುವ ಪೂರ್ವದ ಎಷ್ಟು ತಿಂಗಳು ಮತ್ತು ವರ್ಷಗಳ ಹಿಂದೆ ಹೊಟ್ಟೆಯಲ್ಲಿ ಗಡ್ಡೆ ಬಂದಿತ್ತು ಎಂದು ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಮರಣ ಹೊಂದುವ ಪೂರ್ವ 3 ತಿಂಗಳಲ್ಲಿ ಹಾಸಿಗೆ ಹಿಡಿದಾಗ ಸದರಿ ಸಮಸ್ಯೆ ಬಗ್ಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

4. ಅವರು ಸಾಯುವ ಪೂರ್ವದಲ್ಲಿ ಗಟ್ಟಿಮುಟ್ಟಾಗಿ ಇದ್ದು, ಅವರೇ ಸ್ವತಃ ಓಡಾಡಿಕೊಂಡು ಮತ್ತು ಕೆಲಸ ಮಾಡಿಕೊಂಡು ಇದ್ದರು ಎಂದರೆ ಸಾಕ್ಷಿಯು ಸಾಯುವ 10 ವರ್ಷಗಳ ಪೂರ್ವದಿಂದಲೂ ಮತ್ತು ಸಾಯುವವರೆಗೂ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಅವರು ಸದರಿ 10 ವರ್ಷದ ಪೂರ್ವದ ಮೊದಲು ಜಮೀನುಗಳನ್ನು ವಹಿವಾಟು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಕೂಲಿ



ಆಳುಗಳ ಮೂಲಕ ಕೆಲಸ ಮಾಡಿಸುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ 10 ವರ್ಷದ ಪೂರ್ವದಲ್ಲಿಯೇ ನನ್ನ ತಂದೆ ಯಲ್ಲಪ್ಪ ರವರು ತಮಗೆ ಬಂದ ಹಿಸ್ಸೇಯ ಆಸ್ತಿಗಳನ್ನು ವಹಿವಾಟು ಮಾಡಿಸಿಕೊಳ್ಳುತ್ತಿದ್ದರು ಮತ್ತು ಅದೇ ರೀತಿ ಆತನ ಮಕ್ಕಳಿಗೆ ಗಂಡು ಮಕ್ಕಳಿಗೆ ನೀಡಿದ ಹಿಸ್ಸೇಯ ಆಸ್ತಿಗಳನ್ನು ಅವರು ವಹಿವಾಟು ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಮತ್ತು ಇತರೆ ಹೆಣ್ಣುಮಕ್ಕಳು ಸಹ ನನ್ನ ತಂದೆ ಹಿಸ್ಸೇಗೆ ಬಂದ ಜಮೀನುಗಳನ್ನು ವ್ಯವಸಾಯದ ಪರಿಕರಗಳನ್ನು ಉಪಯೋಗಿಸಿ ವಹಿವಾಟು ಮಾಡುತ್ತಿದ್ದೆವು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಬಂದ ಹಿಸ್ಸೇಯ ಆಸ್ತಿಗಳಲ್ಲಿ ಮಾತ್ರ ನನಗೆ ಹಿಸ್ಸೇಯ ಹಕ್ಕು ಇದೆ ಎಂದರೆ ಸಾಕ್ಷಿಯು ಅಷ್ಟು

ಜಮೀನು ಗಳಲ್ಲಿಯೂ ಹಿಸ್ಸೇಯ ಹಕ್ಕು ಇದೆ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಈ ನ್ಯಾಯಾಲಯವು ಅಷ್ಟು ಆಸ್ತಿಗಳು ಯಾವುವು ಎಂದು ಪ್ರಶ್ನೀಸಲಾಗಿ ಸಾಕ್ಷಿಯು ನನ್ನ ತಂದೆ ಹೆಸರಿನಲ್ಲಿ ಇರುವ ಆಸ್ತಿಗಳಲ್ಲಿ ಹಕ್ಕು ಇದೆ ಎಂದು ನುಡಿಯುತ್ತಾರೆ.

5. ದಾವಾ ಶೆಡ್ಯೂಲ್ ಬಿ(3) ಮತ್ತು (4) ರ ಆಸ್ತಿಗಳು 1 ನೇ ಪ್ರತಿವಾದಿ ಮತ್ತು ಆತನ ಹೆಂಡತಿಯಾದ ನೇತ್ರಾ ರವರ ಹೆಸರಿನಲ್ಲಿ ಇವೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿದ್ದು, ಆತನ ಹೆಂಡತಿ ಹೆಸರಿನಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಪ್ರಸ್ತುತ ದಾವೆಯಲ್ಲಿ 1 ನೇ ಪ್ರತಿವಾದಿಯ ಹೆಂಡತಿಯನ್ನು ಪಕ್ಷಕಾರರಾಗಿ ಮಾಡಿಲ್ಲ ಎಂದರೆ ಗೊತ್ತಿಲ್ಲ.

6. 2 ನೇ ವಾದಿಗೆ ನನ್ನ ತಂದೆ ಯಲ್ಲಪ್ಪ ರವರು 2 ಎಕರೆ ಜಮೀನನ್ನು ಹಂಚಿಕೆ ಮಾಡಿ ನೀಡಿರುತ್ತಾರೆ. ಸದರಿ 2 ಎಕರೆ ಜಮೀನನ್ನು ಆಕೆಗೆ ಹಂಚಿಕೆ ಮಾಡಿ 38 ವರ್ಷಗಳು ಆಗಿವೆ ಎಂದರೆ ಸರಿ. ಸದರಿ ಹಂಚಿಕೆಯ ನಂತರ ಡ ಸಂಃ 639 ಆಕೆಯ ಹೆಸರಿನಲ್ಲಿ ಮಂಜೂರು ಆಗಿದೆ ಎಂದರೆ ಸರಿ. ಆ 38 ವರ್ಷಗಳ ಹಿಂದೆಯೇ ನನ್ನ ತಂದೆ



ಯಲ್ಲಪ್ಪ ರವರು ಆತನ ಗಂಡು ಮಕ್ಕಳಿಗೂ ಸಹ ಆಸ್ತಿಗಳನ್ನು ಹಂಚಿಕೆ ಮಾಡಿ ನೀಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಹಂಚಿಕೆ ಆದ ಸಮಯದಿಂದಲೂ ಅವರವರ ಹಿಸ್ಸೇಗೆ ಬಂದ ಆಸ್ತಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಪಹಣಿ ಪತ್ರಿಕೆಗಳು ಆಗಿರುತ್ತವೆ ಎಂದರೆ ಗೊತ್ತಿಲ್ಲ.

7. ಸ ನಂಃ 89/1 ರ ಜಮೀನನ್ನು 1 ನೇ ಪ್ರತಿವಾದಿಯು ವಹಿವಾಟು ಮಾಡುತ್ತಿರುವು ದನ್ನು ನಾನು ನೋಡಿರುವುದಿಲ್ಲ. 1 ನೇ ಪ್ರತಿವಾದಿ ಸ ನಂಃ 89/1 ರ ಜಮೀನಿನಲ್ಲಿ ಯಾವ ರೀತಿ ಫಸಲನ್ನು ಬೆಳೆದಿರುತ್ತಾನೆ ಎಂದು ಗೊತ್ತಿಲ್ಲ. ದಾವಾ ಶೆಡ್ಯೂಲ್ ಬಿ(3) ಮತ್ತು (4) ರ ಆಸ್ತಿಗಳನ್ನು 1 ನೇ ಪ್ರತಿವಾದಿಯು ವೈಯಕ್ತಿಕವಾಗಿ ಖರೀದಿಸಿದ ಆಸ್ತಿ ಎಂದರೆ ಸಾಕ್ಷಿಯು ನನ್ನ ತಂದೆಯು ಖರೀದಿಸಿದ ಆಸ್ತಿಗಳು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ನನ್ನ ತಂದೆ ಖರೀದಿ ಮಾಡಿದ್ದರು ಮತ್ತು ನನ್ನ ತಂದೆಯ ಹೆಸರಿನಲ್ಲಿ ಇದ್ದವು ಎಂದು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಬಿ(3) ಮತ್ತು (4) ರ ಆಸ್ತಿಗಳು 1 ನೇ

ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳು ಇರುವುದರಿಂದ ಅವುಗಳ ಮೇಲೆ ನನಗಾಗಲೀ ಇತರ ವಾದಿಯರಿಗಾಗಲೀ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

8. ಜಮೀನುಗಳು ಮತ್ತು ಗ್ರಾಮ ಪಂಚಾಯಿತಿ ಆಸ್ತಿಗಳು ನನ್ನ ಸಹೋದರರು ಮತ್ತು ಸಹೋದರಿಯ ಹೆಸರಿನಲ್ಲಿ ಖಾತೆ ಆಗಿರುವುದನ್ನು ನಾನು ಸೂಕ್ತ ಪ್ರಾಧಿಕಾರದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ನನ್ನ ಸಹೋದರರು ತಮ್ಮ ಹಿಸ್ಸೇಯ ಆಸ್ತಿಗಳಲ್ಲಿ ಅಡಮಾನ ಮಾಡಿ ಬ್ಯಾಂಕುಗಳಿಂದ ಮತ್ತು ಸೊಸೈಟಿಗಳಿಂದ ಸಾಲವನ್ನು ಪ್ರತ್ಯೇಕವಾಗಿ ಪಡೆದಿರುತ್ತಾರೆ ಎಂದರೆ ಗೊತ್ತಿಲ್ಲ. 38 ವರ್ಷಗಳ ಹಿಂದೆಯೇ ಆದ ವಿಭಾಗದಂತೆ ನನ್ನ ಸಹೋದರರು ಮತ್ತು 2 ನೇ ವಾದಿಯು ತಮಗೆ ಬಂದ ಹಿಸ್ಸೇಯ ಆಸ್ತಿಗಳನ್ನು ಮಾಲೀಕತ್ವದಲ್ಲಿ ವಹಿವಾಟು ಮಾಡುತ್ತಿದ್ದಾರೆ ಎಂದರೆ ಗೊತ್ತಿಲ್ಲ.



9. 3 ನೇ ವಾದಿಯು ಮದುವೆ ಆಗಿರುವುದಿಲ್ಲ ಎಂದರೆ ಸರಿ. ಆಕೆಯು ಅಂಗವಿಕಲೆ ಮತ್ತು ಬುದ್ದಿಮಂದ್ಯೆ ಇರುವುದರಿಂದ ಮದುವೆ ಆಗಿರುವುದಿಲ್ಲ. ಆಕೆಯನ್ನು 2 ನೇ ವಾದಿಯೇ ನೋಡಿಕೊಳ್ಳುತ್ತಿದ್ದಾಳೆ. ಆಕೆಯು ಬುದ್ದಿ ಮಂದ್ಯೆ ಇರುವುದರಿಂದ ಈ ಪ್ರಕರಣವನ್ನು ಆಕೆಯ ಪರವಾಗಿ ನಡೆಸುತ್ತಿದ್ದೇವೆ ಎಂದು ಸೂಕ್ತ ಕಾನೂನಿನ ಅಡಿಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಗೊತ್ತಿಲ. ಆಕೆಯ ಹಕ್ಕು ಮತ್ತು ಹಿತಾಸಕ್ತಿಗಳನ್ನು ಕಾಪಾಡಲು ಸೂಕ್ತ ಅರ್ಜಿ ಸಲ್ಲಿಸದೇ ದಾವೆಯನ್ನು ನಡೆಸುತ್ತಿರುವುದರಿಂದ, ಈ ದಾವೆ ಊರ್ಜಿತವಲ್ಲ ಎಂದರೆ ಗೊತ್ತಿಲ್ಲ.

10. ನನ್ನ ಸಹೋದರರೆಲ್ಲರೂ ಪ್ರತ್ಯೇಕವಾಗಿ ಮನೆಗಳನ್ನು ಮಾಡಿಕೊಂಡು ವಾಸವಾಗಿದ್ದಾರೆ ಎಂದರೆ ಸರಿ. 3 ನೇ ಪ್ರತಿವಾದಿಯು ತನ್ನ ಹಿಸ್ಸೇಗೆ ಬಂದ ಜಮೀನಿನಲ್ಲಿಯೇ ಮನೆ ಕಟ್ಟಿಕೊಂಡಿದ್ದಾನೆ ಎಂದರೆ ಸರಿ. 2 ನೇ ಪ್ರತಿವಾದಿಯು ಸ್ವಲ್ಪ ದಿನ ಹೆಂಡತಿಯ ಮನೆಯಲ್ಲಿ ಮತ್ತು ಒಂದಷ್ಟು ದಿನ ಬೆರೋಬ್ಬರ ಮನೆಗಳಲ್ಲಿ ಕೂಲಿ ಕೆಲಸ ಮಾಡುತ್ತಾ ಜೀವನ ಸಾಗಿಸುತ್ತಿದ್ದಾನೆ. 1 ನೇ ಪ್ರತಿವಾದಿಯು ಅಂಬೇಡ್ಕರ ಅಭಿವೃದ್ದಿ ಕಾರ್ಪೋರೇಷನ್ ನಿಂದ ಸಾಲವನ್ನು ಪಡೆದು ತನ್ನ ಹಿಸ್ಸೇಗೆ ಬಂದ ಜಮೀನುಗಳಲ್ಲಿ ಕೊಳವೆ ಬಾವಿಯನ್ನು ತೆಗೆಸಿ ಜಮೀನುಗಳನ್ನು ಅಭಿವೃದ್ದಿಪಡಿಸಿದ್ದಾನೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ತನ್ನ ಹಿಸ್ಸೇಗೆ ಬಂದ ಆಸ್ತಿಗಳನ್ನು ಚೆನ್ನಾಗಿ ಅಭಿವೃದ್ದಿ ಪಡಿಸಿಕೊಂಡು ಒಳ್ಳೇಯ ಜೀವನವನ್ನು ನಡೆಸುತ್ತಿರುವುದನ್ನು ಸಹಿಸದೇ ಉಳಿದ ಪ್ರತಿವಾದಿಯರೊಂದಿಗೆ ಮಿಲಾಪಿ ಆಗಿ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದ

ಪತ್ರ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಸಂಗತಿಗಳೆಲ್ಲವೂ ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನಾನು ಮತ್ತು ಇತರ ವಾದಿಗಳು ಒಟ್ಟಿಗೆ ಮಾಹಿತಿ ನೀಡಿ ಸಲ್ಲಿಸಿರುತ್ತೇವೆ. 1 ನೇ ಪ್ರತಿವಾದಿಗೆ ಬಂದ ಹಿಸ್ಸೇಯ ಆಸ್ತಿಗಳಲ್ಲಿ ಮತ್ತು ಸ್ವಯಾರ್ಜಿತ ಆಸ್ತಿಗಳಲ್ಲಿ ಹಿಸ್ಸೇಯ



ಹಕ್ಕು ಯಾವುದೇ ವಾದಿಯರಿಗಾಗಲೀ ಅಥವಾ ಇತರ ಪ್ರತಿವಾದಿಯರಿಗಾಗಲೀ ಇರುವುದಿಲ್ಲ ಎಂದರೆ ಸರಿಯಲ್ಲ.

11. 4 ನೇ ಪ್ರತಿವಾದಿಯು ಮದುವೆ ಆಗಿಲ್ಲ ಎಂದರೆ ಸರಿ. ಆತನು ಸಹ ಅಕ್ಕಳಾದ 2 ನೇ ವಾದಿಯ ಜೊತೆ ಇದ್ದಾನೆ ಎಂದರೆ ಸರಿ. 2 ನೇ ಪ್ರತಿವಾದಿಯು ಹೋದಾಗ ಬಂದಾಗ ನನ್ನ ಮನೆ ಮತ್ತು ಉಳಿದ ವಾದಿಯರ ಮನೆಯಲ್ಲಿ ಉಳಿದುಕೊಂಡು ಹೋಗುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆತನು ಒಳ್ಳೇಯ ನಡತೆಯ ವ್ಯಕ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿಗಳಿಂದಃ**

ಸದರಿ ಪ್ರತಿವಾದಿಗಳು ಗೈರು ಹಾಜರು. ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲನ್ನು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ